## ಗಡಿಬಿಡಿಯ ಪ್ರಮಾದ



ಮಹಿಳೆಯೊಬ್ಬಳಿಗೆ ನಗರದ ಒಳ್ಳೆಯ ಕಂಪನಿಯೊಂದರಲ್ಲಿ ಕೆಲಸ ಸಿಕ್ಕಿತ್ತು. ಆ ಕೆಲಸಕ್ಕೆ ಸೇರಲು ಆಕೆ ಒಬ್ಬಳೇ ಹೋಗಿದ್ದಳು. ಆಕೆಗೆ ಆ ಕಂಪನಿಯವರು ವಾಸಕ್ಕೆಂದು ಒಂದು ಫ್ಲ್ಯಾಟ್ ಕೊಟ್ಟಿದ್ದರು. ಈ ವಿಷಯ ತನ್ನ ಪತಿಗೆ ತಿಳಿಸಲು ಆಕೆ ಮೆಸೇಜ್ ಮಾಡಿದ್ದಳು.

ಆದರೆ, ಈ ಗಡಿಬಿಡಿಯಲ್ಲಿ ಆಕೆ ಹಾಗೆ ಮಾಡುವಾಗ ಬೇರೆ ನಂಬರ್‌ಗೆ ಕಳುಹಿಸಿದ್ದಳು. ಆಕೆಯ ಸಂದೇಶ ಓದಿದ ವ್ಯಕ್ತಿ ಎಂಟು ಗಂಟೆಗಳ ಹಿಂದೆ ತೀರಿಕೊಂಡ ತನ್ನ ಪತ್ನಿಯ ಅಂತಿಮ ಸಂಸ್ಕಾರ ಮುಗಿಸಿ ಬಂದು ಬೇಸರದಲ್ಲಿ ಕುಳಿತಿದ್ದ.

ಯಾವಾಗ ತನ್ನ ಮೊಬೈಲ್‌ಗೆ ಬಂದ ಸಂದೇಶ ಓದಿದನೋ ಕ್ಷಣಾರ್ಧದಲ್ಲಿ ಆತ ಮೂರ್ಛೆ ಹೋಗಿ ಬಿದ್ದಿದ್ದ. ಕಾರಣ ಇಷ್ಟೇ. ಸಂದೇಶ ಕಳುಹಿಸಿದಾಕೆ 'ಮೈ ಡಿಯರ್, ನೀವೇನೂ ಹೆಚ್ಚು ಚಿಂತೆ ಮಾಡಬೇಡಿ. ಇಲ್ಲಿ ನನಗೆ ವಾಸಿಸಲು ಎಲ್ಲ ಅನುಕೂಲವಿರುವ ಮನೆ ಕೊಟ್ಟಿದ್ದಾರೆ. ಇನ್ನು ಎರಡು ಮೂರು ದಿನಗಳಲ್ಲಿ ನಿಮ್ಮನ್ನೂ ಇಲ್ಲಿ ಕರೆಸಿಕೊಳ್ಳುವೆ. ಡೋಂಟ್ ವರಿ' ಎಂದು ಬರೆದಿದ್ದಳು.

**ಅರವಿಂದ ಜಿ. ಜೋಷಿ**

---

## ರಾತ್ರಿ ಇಳಿಬೇಕು ಸಾರ್!



ವಿಜ್ಞಾನ ಪರಿಷತ್ತು ವತಿಯಿಂದ ನಾಲ್ಕು ಜನರ ತಂಡವೊಂದು ನಮ್ಮ ಶಾಲೆಗೆ ಭೇಟಿ ನೀಡಿತು. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಮೂಲ ವಿಜ್ಞಾನದ ಪ್ರಯೋಗಗಳನ್ನು ಮಾಡಿ ತೋರಿಸಿದರು.

ಅದರಲ್ಲಿ ಒಬ್ಬ ಸೂರ್ಯನ ಬಗ್ಗೆ ವಿವರಿಸುತ್ತಾ 'ಸೂರ್ಯ ಸದಾ ಉರಿಯುವ ಬೆಂಕಿಯ ಚೆಂಡು. ಅವನ ಬಳಿ ಸುಳಿಯಲು ಸಾಧ್ಯವೇ ಇಲ್ಲ. ಸೂರ್ಯನ ಮೇಲೆ ಮಾನವರಾಗಲಿ, ಮಾನವ ನಿರ್ಮಿತ ರೋಬೋಟ್ ಗಳಾಗಲಿ, ಯಾವುದೇ ಉಪಕರಣಗಳನ್ನು ಇಳಿಸಲು ಸಾಧ್ಯವೇ ಇಲ್ಲ' ಎಂದ. ಆಗ ಒಬ್ಬ ವಿದ್ಯಾರ್ಥಿ ಎದ್ದು ನಿಂತು'ಸೂರ್ಯನ ಮೇಲೆ ರಾತ್ರಿ ಹೊತ್ತು ಇಳಿಬೇಕು ಸಾರ್!' ಎಂದ.

**ಮಲ್ಲಿಕಾರ್ಜುನ ಸುರಧೇನುಪುರ**